# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಸಂಜಯ್ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಮಹದೇವ | | **21.12.2024** |
| **ವಯಸ್ಸು** | ಃ **24 ವರ್ಷ** | | |
| **ವೃತ್ತಿ** | ಃ ಡ್ರೈವರ್ | **ಪ್ರಾ.ಸಾ.** | ಃ **7** |
| **ವಾಸಸ್ಥಳ** | ಃ ಕುಂಬಾರಕೊಪ್ಪಲು | **ಚಾ.ಸಾ.** | ಃ **8** |

## ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. *14.03.2023* ರಂದು ಸಂಜೆ ನಾನು ಕೆಲಸ ಮುಗಿಸಿಕೊಂಡು ರಾತ್ರಿ *8.30* ರಿಂದ *8.45* ರ ವೇಳೆಯಲ್ಲಿಚಂದನ್ ಇವರ ಮನೆಬಳಿಇರು ವಲಿಂಗಡಿ ಹೋಗುತ್ತಿದ್ದೆ.ಆ ಕಾಲಕ್ಕೆ ಒಬ್ಬಹುಡುಗ ಕೈಯಲ್ಲಿಚಾಕು ಹಿಡಿದುಕೊಂಡು ಓಡಿ ಹೋಗುತ್ತಿದ್ದ. ಆ ಕಾಲಕ್ಕೆ ಚಂದನ್ ಮತ್ತು ಅವರ ತಂದೆ ಓಡಿಹೋಗುತ್ತಿದ್ದರು. ಆಗ ನಾನು ಸಹ ಅವರೊಂದಿಗೆ ಆ ಹುಡುಗನನ್ನು ಹಿಡಿಯಲು ಹೋಗಿದ್ದೆ. ಆದರೆ ಆ ಹುಡುಗ ನಮ್ಮ ಕೈಗೆ ಸಿಗಲಿಲ್ಲ. ಕೋರ್ಟು ಮುಂದಿರುವ ಆರೋಪಿತನೇ ಆ ದಿನ ಚಾಕು ಹಿಡಿದುಕೊಂಡು ಹೋಗುತ್ತಿದ್ದ ಹುಡುಗ ಇರುತ್ತಾನೆ. ಆ ಸ್ಥಳದಲ್ಲಿ ಲೈಟ್ ಬೆಳಕು ಇದ್ದುದ್ದರಿಂದ ನಾನುಆ ರೋಪಿತನನ್ನು ನೋಡಿದ್ದೆ. ಆ ಕಾಲಕ್ಕೆ ಚಂದನ್ ಗೆ ಬೆನ್ನಿನ ಎಡಭಾಗದಲ್ಲಿ ರಕ್ತ ಬರುತ್ತಿತ್ತು. ಆಗ ನಾವು ಚಂದನ್ ನನ್ನು ಆಸ್ಪತ್ರೆಗೆ ಸೇರಿಸಿದೆವು. ಅದೇ ದಿನ ಚಿಕಿತ್ಸೆ ಪಡೆದುಕೊಂಡು ವಾಪಸ್ ಬಂದಿದ್ದ. ಆ ಕಾಲಕ್ಕೆ ಚಂದನ್ ತಾನು ವಿನಯ್ ಎನ್ನುವಾತನ ಕೇಸಿಗೆ ಸಾಕ್ಷಿ ಹಾಕಿದ್ದು ಆರೋಪಿತನು ಆ ಕೇಸಿನಲ್ಲಿ ಸಾಕ್ಷಿ ಹೇಳಬೇಡ ಎಂದು ಬೆದರಿಕೆ ಹಾಕಿ ಹಲ್ಲೆ ಮಾಡಿದ್ದಾಗಿ ಹೇಳಿದ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಈಗ ನೋಡುತ್ತಿರುವ ಮು.ಮಾ *2* ಡ್ರಾಗರ್ ಆ ದಿನ ಆರೋಪಿತನ ಕೈಯಲ್ಲಿ ಇದ್ದ ಆಯುಧ ಇರುತ್ತದೆ. ಮು.ಮಾ *3* ಮತ್ತು *4* ಎಂದು ಗರುತಿಸಿದ ಬಟ್ಟೆಗಳು ಆ ದಿನ ಆರೋಪಿ ಧರಿಸಿದ್ದ ಬಟ್ಟೆ ಇರುತ್ತದೆ. ಈಗ ನಾನು ನೋಡುತ್ತಿರುವ ಮು.ಮಾ*1* ಆದಿನ ಚಂದನ ಧರಿಸಿದ್ದ ಶರ್ಟು ಇದೆ.

***SC No. 245/2023***
***PW-06***

<u>**ಪಾಟೀ ಸವಾಲು : ಆರೋಪಿ ಪರ ವಕೀಲರ** ಗೈರು ಹಾಜರಿದ್ದು ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.</u>

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***